(ಅ) ಬೆಂಗಳೂರು ನಗರದ ಕೆಂಪೇಗೌಡ ರಸ್ತೆಯ ಜನತಾ ಬಜಾರ್ ಆವರಣದಲ್ಲಿರುವ ಸರ್ಕಾರಿ ರೇಷ್ಮೆ ಕಾರ್ಖಾನೆ ಮುಡಿಗುಂಡಂ ರೇಷ್ಮೆ ವಸ್ತ್ರ ಮಾರಾಟ ಮಳಿಗೆ ನವೀಕರಣಕ್ಕೆ ಹಾಗೂ ವಸ್ತ್ರಗಳ ಮುದ್ರಣದಲ್ಲಿ ಸಾಕಷ್ಟು ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ನವೀಕರಣಕ್ಕೆ ಸಂಬಂಧಿಸಿದ ವಸ್ತಗಳ ಖರೀದಿ ಹಾಗೂ ವಸ್ತ್ರಗಳ ಮುದ್ರಿತ ಮಾಡಲು ಯಾವುದೇ ರೀತಿ ವ್ಯಾಪಕ ಪ್ರಚಾರ ಮಾಡದೇ ಇಲಾಖೆಯವರೇ ಇಷ್ಟಾನುಸಾರ ಸಮಿತಿ ರಚನೆ ಮಾಡಿಕೊಂಡು ಸರ್ಕಾರದ ಮಂಜೂರಾತಿ ಇಲ್ಲದೆ ಅವ್ಯವಹಾರಕ್ಕೆ ಅವಕಾಶ ಮಾಡಿಕೊಂಡು ಬಾರಿ ಅವ್ಯವಹಾರ ನಡೆಸಲಾಗಿರುವ ಬಗ್ಗೆ ಸಿ.ಓ.ಡಿ. ತನಿಖೆ ನಡೆಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಇಲ್ಲ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ರೇಷ್ಮೆಯನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವುದು

2084 (2447) : ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರೇಷ್ಮೆ ಇಲಾಖೆಯ ರೇಷ್ಮೆ ಕಾರ್ಖಾನೆಗಳಲ್ಲಿ ಉತ್ಪಾದಿಸಲಾದ ಉತ್ತಮ ಗುಣಮಟ್ಟದ ಬಿಳಿ ರೇಷ್ಮೆಯನ್ನು ದುರುದ್ದೇಶದಿಂದ ರೇಷ್ಮೆ ವಿನಿಮಯ ಕೇಂದ್ರದ ಫಿಲೇಚರ್ ವಿಭಾಗದಲ್ಲಿ ಹರಾಜಿಗೆ ಹಾಕಬೇಕಾದ ರೇಷ್ಮೆಯನ್ನು ಕೆಳಮಟ್ಟದರ್ಜೆ ಚರಕಾ ರೇಷ್ಮೆ ಹರಾಜು ಹಾಕುವ ವಿಭಾಗದಲ್ಲಿ ಹರಾಜು ಹಾಕಿ ಕಡಿಮೆ ದರಕ್ಕೆ ರೇಷ್ಮೆ ಮಾರಾಟ ಮಾಡಿರುವುದು ಆಯುಕ್ತರವರ ಗಮನಕ್ಕೆ ಬಂದಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು?

(ಆ) ಹಾಗಿದ್ದಲ್ಲಿ ಇದರಿಂದ ಸರ್ಕಾರಕ್ಕೆ ಸಾಕಷ್ಟು ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ರೇಷ್ಮೆ ವಿನಿಮಯ ಕೇಂದ್ರ ನಿಯಮಾವಳಿಗಳ ರೀತ್ಯಾ ಫಿಲೇಚರ್ ರೇಷ್ಮೆಯನ್ನು ಫಿಲೇಚರಿ ರೇಷ್ಮೆ ಎಂದು ಮಾರಾಟ ಮಾಡಲಾಗಿದೆಯೇ ಹೊರತು ಕೆಳಮಟ್ಟದ ಚರಕಾ ರೇಷ್ಮೆ ಎಂದು ಮಾರಾಟವಾಗಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.